Akashvani: Bangalore
National Bulletin In Kannada
18.04.2026: 7.35AM

**ಆಕಾಶವಾಣಿ, ಬೆಂಗಳೂರು**

**ರಾಷ್ಟ್ರೀಯ ವಾರ್ತೆಗಳು**

18.04.2026: 7.35AM

********

**ಮುಖ್ಯಾಂಶಗಳು :**

1. ಶಾಸನ ಸಭೆಗಳಲ್ಲಿ ಮಹಿಳಾ ಮೀಸಲಾತಿ ಕುರಿತ ಸಂವಿಧಾನದ ೧೩೯ನೇ ತಿದ್ದುಪಡಿ ಮಸೂದೆಗೆ ಲೋಕಸಭೆಯಲ್ಲಿ ಸೋಲು
2. ಮಹಿಳೆಯರಿಗೆ ಮೀಸಲಾತಿ ಕಲ್ಪಿಸುವ ಮಹತ್ವದ ಅವಕಾಶಕ್ಕೆ ವಿಪಕ್ಷಗಳಿಂದ ಅಡ್ಡಿ - ಸಚಿವ ಕಿರಣ್ ರಿಜಿಜು
3. ತೆಹ್ರಾನ್‌ನೊಂದಿಗೆ ಶಾಂತಿ ಒಪ್ಪಂದ ಏರ್ಪಡುವ ವರೆಗೆ ಇರಾನ್ ಮೇಲಿನ ನೌಕಾ ನಿರ್ಬಂಧ ಮುಂದುವರಿಕೆ - ಡೊನಾಲ್ಡ್ ಟ್ರಂಪ್
4. ಬ್ರಿಟನ್ - ಫ್ರಾನ್ಸ್ ನೇತೃತ್ವದ ಸಾಗರ ಭದ್ರತಾ ಉಪಕ್ರಮಗಳಲ್ಲಿ ಭಾಗವಹಿಸಲು ಭಾರತಕ್ಕೆ ಅಧಿಕೃತ ಆಹ್ವಾನ
5. ಮಹಿಳಾ ಟಿ-೨೦ ಕ್ರಿಕೆಟ್; ಡರ್ಬನ್‌ನಲ್ಲಿ ಭಾರತ ತಂಡವನ್ನು ೬ ವಿಕೆಟ್ ಅಂತರದಿಂದ ಸೋಲಿಸಿದ ದಕ್ಷಿಣ ಆಫ್ರಿಕಾ

*******

ಲೋಕಸಭೆ ಹಾಗೂ ರಾಜ್ಯ ವಿಧಾನಸಭೆಗಳಲ್ಲಿ ಮಹಿಳೆಯರಿಗೆ ಶೇಕಡ ೩೩ರಷ್ಟು ಮೀಸಲಾತಿ ಕಲ್ಪಿಸುವ ಉದ್ದೇಶದ ಸಂವಿಧಾನ ೧೩೧ನೇ ತಿದ್ದುಪಡಿ ಮಸೂದೆ, ೨೦೨೬ ಲೋಕಸಭೆಯಲ್ಲಿ ಅಂಗೀಕಾರ ಪಡೆಯಲಿಲ್ಲ. ಈ ಮಸೂದೆಗೆ ಅಗತ್ಯವಾದ ಮೂರನೇ ಎರಡರಷ್ಟು ಬಹುಮತ ಲಭಿಸಲಿಲ್ಲ. ೫೨೮ ಸದಸ್ಯರಲ್ಲಿ ಒಟ್ಟು ೩೫೨ ಮತಗಳು ಮಸೂದೆ ಅಂಗೀಕಾರಕ್ಕೆ ಅಗತ್ಯವಾಗಿತ್ತು. ಮತದಾನದ ವೇಳೆ ೨೯೮ ಸಂಸದರು ಮಸೂದೆಗೆ ಬೆಂಬಲವಾಗಿ ಮತ ಹಾಕಿದರೆ, ೨೩೦ ಮಂದಿ ವಿರೋಧ ವ್ಯಕ್ತಪಡಿಸಿದರು. ಲೋಕಸಭಾಧ್ಯಕ್ಷ ಓಂ ಬಿರ್ಲಾ ಮತದಾನದ ಫಲಿತಾಂಶವನ್ನು ಪ್ರಕಟಿಸಿ, ಅಗತ್ಯ ಬಹುಮತ ದೊರಕದ ಕಾರಣ ಈ ಕಲಾಪವನ್ನು ಮುಂದುವರಿಸಲು ಸಾಧ್ಯವಿಲ್ಲ ಎಂದು ತಿಳಿಸಿದರು. ನಂತರ ಸಂಸದೀಯ ವ್ಯವಹಾರಗಳ ಸಚಿವ ಕಿರಣ್ ರಿಜಿಜು ಮಾತನಾಡಿ, ಕ್ಷೇತ್ರ ಮರು ವಿಂಗಡಣೆ ಮಸೂದೆ ೨೦೨೬ ಮತ್ತು ಕೇಂದ್ರಾಡಳಿತ ಪ್ರದೇಶಗಳ ಕಾನೂನು ತಿದ್ದುಪಡಿ ಮಸೂದೆ, ೨೦೨೬ ಸೇರಿ ಇತರೆ ಎರಡು ಮಸೂದೆಗಳು ಈ ಸಂವಿಧಾನ ತಿದ್ದುಪಡಿ

ಮಸೂದೆಯೊಂದಿಗೆ ಪರಸ್ಪರ ಸಂಬಂಧ ಹೊಂದಿರುವುದರಿಂದ ಅವುಗಳನ್ನು ಕೂಡ ಅಂಗೀಕಾರ ಪ್ರಕ್ರಿಯೆಗೆ ಮುಂದುವರೆಸುವುದಿಲ್ಲ ಎಂದು ಹೇಳಿದರು. ಮಹಿಳೆಯರಿಗೆ ಮೀಸಲು ಒದಗಿಸುವ ಅವಕಾಶವನ್ನು ವಿರೋಧ ಪಕ್ಷಗಳು ಕಳೆದುಕೊಂಡಿವೆ ಎಂದು ಅವರು ಆರೋಪಿಸಿದರು.ಕ್ಷೇತ್ರ ಮರು ವಿಂಗಡಣೆ ಮಸೂದೆ ೨೦೨೬ ಪ್ರಕಾರ ಕ್ಷೇತ್ರ ಪುನರ್ವಿಂಗಡಣೆ ಆಯೋಗವನ್ನು ರಚಿಸಿ, ಲೋಕಸಭೆ ಮತ್ತು ವಿಧಾನಸಭೆಗಳಲ್ಲಿ ಮಹಿಳಾ ಮೀಸಲು ಜಾರಿಗೆ ತರಲು ಕ್ರಮ ಕೈಗೊಳ್ಳಲು ಉದ್ದೇಶಿಸಲಾಗಿತ್ತು. ಈ ಆಯೋಗವು ಕ್ಷೇತ್ರಗಳ ಮರುರಚನೆ ಮಾಡಿ, ಮಹಿಳೆಯರಿಗೆ ಮೀಸಲು ಸ್ಥಾನಗಳನ್ನು ನಿಗದಿಪಡಿಸುವ ಅಧಿಕಾರ ಹೊಂದಿದೆ. ಇದರಲ್ಲಿ ಅನುಸೂಚಿತ ಜಾತಿ ಹಾಗೂ ಅನುಸೂಚಿತ ಪಂಗಡದ ಮಹಿಳೆಯರೂ ಒಳಗೊಂಡಿದ್ದಾರೆ. ಕೇಂದ್ರಾಡಳಿತ ಪ್ರದೇಶಗಳ ಕಾನೂನು ತಿದ್ದುಪಡಿ ಮಸೂದೆ, ೨೦೨೬ ದೆಹಲಿ, ಪುದುಚೇರಿ ಮತ್ತು ಜಮ್ಮು-ಕಾಶ್ಮೀರಕ್ಕೂ ಇದೇ ಬದಲಾವಣೆಗಳನ್ನು ವಿಸ್ತರಿಸುವ ಉದ್ದೇಶ ಹೊಂದಿತ್ತು.ಇದಕ್ಕೂ ಮುನ್ನ ಕೇಂದ್ರ ಗೃಹ ಸಚಿವ ಅಮಿತ್ ಶಾ, ಮಸೂದೆಗಳ ಕುರಿತು ನಡೆದ ಚರ್ಚೆಗೆ ಉತ್ತರಿಸಿ, ಲೋಕಸಭೆ ಹಾಗೂ ರಾಜ್ಯ ಮತ್ತು ಕೇಂದ್ರಾಡಳಿತ ಪ್ರದೇಶಗಳ ವಿಧಾನಸಭೆಗಳಲ್ಲಿ ಮಹಿಳಾ ಮೀಸಲು ಖಚಿತಪಡಿಸಲು ಸರ್ಕಾರ ಎಲ್ಲಾ ಕ್ರಮಗಳನ್ನು ಕೈಗೊಳ್ಳುತ್ತದೆ. ೨೦೨೯ರ ಲೋಕಸಭೆ ಚುನಾವಣೆಯನ್ನು ಮಹಿಳಾ ಮೀಸಲಿನೊಂದಿಗೆ ನಡೆಸುವುದು ಈ ಮಸೂದೆಗಳ ಉದ್ದೇಶ ಎಂದು ಹೇಳಿದರು.        ಕ್ಷೇತ್ರ ಮರು ವಿಂಗಡಣೆ ಕುರಿತ ವಿರೋಧ ಪಕ್ಷಗಳ ಆತಂಕಗಳನ್ನು ತಳ್ಳಿ ಹಾಕಿದ ಅವರು, ಸಂವಿಧಾನದಲ್ಲಿ ಇದಕ್ಕಾಗಿ ಅವಕಾಶವಿದ್ದು, ಇದು ಪ್ರತಿಯೊಂದು ಕ್ಷೇತ್ರದಲ್ಲೂ ಸಮತೋಲನವನ್ನು ತರಲಿದೆ. ಡಿಲಿಮಿಟೇಶನ್ ಮೂಲಕ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳಿಗೆ ಸ್ಥಾನಗಳ ಸಂಖ್ಯೆ ಹೆಚ್ಚಾಗುತ್ತದೆ ಎಂದು ಅವರು ಹೇಳಿದರು. ದಕ್ಷಿಣ ರಾಜ್ಯಗಳಾದ ಕರ್ನಾಟಕ, ತಮಿಳುನಾಡು, ಆಂಧ್ರ ಪ್ರದೇಶ, ತೆಲಂಗಾಣ ಮತ್ತು ಕೇರಳ ರಾಜ್ಯಗಳಲ್ಲಿ ಲೋಕಸಭೆ ಸ್ಥಾನಗಳ ಸಂಖ್ಯೆ ಕಡಿಮೆಯಾಗುತ್ತದೆ ಎಂಬ ವಿರೋಧ ಪಕ್ಷಗಳ ವಾದವನ್ನು ಅವರು ತಳ್ಳಿಹಾಕಿದರು. ಪ್ರಸ್ತುತ ೫೪೩ ಸ್ಥಾನಗಳಲ್ಲಿ ಈ ಐದು ರಾಜ್ಯಗಳಿಗೆ ೧೨೯ ಸ್ಥಾನಗಳಿದ್ದು, ಇದು ೨೩.೭೬% ಆಗಿದೆ. ಕ್ಷೇತ್ರ ಮರು ವಿಂಗಡಣೆ ನಂತರ ಇದು ೧೯೫ಕ್ಕೆ ಏರಿಕೆಯಾಗಲಿದೆ. ಇದು ಶೇ ೨೩.೮೬ ರಷ್ಟು ಹೆಚ್ಚಾಗಲಿದೆ. ಲಕ್ಷದ್ವೀಪದಂತಹ ಸಣ್ಣ ಕೇಂದ್ರಾಡಳಿತ ಪ್ರದೇಶಕ್ಕೂ ಉತ್ತರ ಪ್ರದೇಶ, ಗುಜರಾತ್ ಮತ್ತು ಬಿಹಾರ ರಾಜ್ಯಗಳಷ್ಟೇ ಹಕ್ಕುಗಳಿವೆ ಎಂದು ಅವರು ಹೇಳಿದರು. ವಿಪಕ್ಷ ನಾಯಕ ರಾಹುಲ್ ಗಾಂಧಿ ಮಾತನಾಡಿ, “ನಾರಿ ಶಕ್ತಿ ವಂದನ ಅಧಿನಿಯಮ” ಮಹಿಳಾ ಮೀಸಲು ಮಸೂದೆ ಅಲ್ಲ, ಇದಕ್ಕೆ ಮಹಿಳಾ ಸಬಲೀಕರಣದೊಂದಿಗೆ ಸಂಬಂಧ ಇಲ್ಲ. ಈ ಮಸೂದೆಗಳ ಮೂಲಕ ಚುನಾವಣಾ ವ್ಯವಸ್ಥೆಯನ್ನೇ ಬದಲಾಯಿಸುವ ಪ್ರಯತ್ನವಾಗಿದೆ. ಇದರಿಂದ ದಲಿತರು ಮತ್ತು ಒಬಿಸಿ ವರ್ಗದವರಿಗೆ ಅನ್ಯಾಯವಾಗುತ್ತದೆ ಎಂದು ಹೇಳಿದರು. ಕೇಂದ್ರ ಸಚಿವ ಎಚ್.ಡಿ. ಕುಮಾರಸ್ವಾಮಿ

ಮಾತನಾಡಿ, ಮಹಿಳಾ ಮೀಸಲನ್ನು ಉಪಕಾರವಾಗಿ ನೋಡಬಾರದು, ಅದು ಸಮಾಜಕ್ಕೆ ಮಹಿಳೆಯರು ನೀಡಿದ ಕೊಡುಗೆಯ ಮಾನ್ಯತೆಯಾಗಿದೆ. ೭೫ ವರ್ಷಗಳ ನಂತರ ಸರ್ಕಾರ ಐತಿಹಾಸಿಕ ಹೆಜ್ಜೆ ಇಟ್ಟಿದೆ ಎಂದು ಅವರು ಹೇಳಿದರು. ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವೆ ಅನ್ನಪೂರ್ಣಾ ದೇವಿ ಮಾತನಾಡಿ, ಪ್ರಧಾನಮಂತ್ರಿ ನರೇಂದ್ರ ಮೋದಿ ಅವರ ನಾಯಕತ್ವದಲ್ಲಿ ಮಹಿಳೆಯರು ದೇಶದ ಅಭಿವೃದ್ಧಿಯ ಪಾಲುದಾರರು ಮಾತ್ರವಲ್ಲ, ನಿರ್ಧಾರ ಕೈಗೊಳ್ಳುವವರೂ ಆಗಿದ್ದಾರೆ ಎಂದು ಹೇಳಿದರು. ಡಿಎಂಕೆ ಸಂಸದ ಕನಿಮೋಳಿ ಮಸೂದೆಗಳಿಗೆ ವಿರೋಧ ವ್ಯಕ್ತಪಡಿಸಿ, ಸರ್ಕಾರ ಈ ಮಸೂದೆಗಳನ್ನು ಚುನಾವಣಾ ವ್ಯವಸ್ಥೆಯನ್ನು ಅಸ್ತವ್ಯಸ್ತಗೊಳಿಸಲು ತಂದಿದೆ ಎಂದು ಆರೋಪಿಸಿದರು. ಕಾಂಗ್ರೆಸ್ ಸಂಸದ ಶಶಿ ತರೂರ್ ಮಾತನಾಡಿ, ಮಹಿಳಾ ಮೀಸಲಿಗೆ ಸಾಮಾನ್ಯ ಒಪ್ಪಿಗೆಯಿರುವ ಈ ಸಂದರ್ಭದಲ್ಲಿ, ಅದನ್ನು ಕ್ಷೇತ್ರ ಮರು ವಿಂಗಡಣೆ ಮಸೂದೆಗೆ ತಳಕು ಹಾಕಿರುವುದು ಸರಿಯಲ್ಲ ಎಂದರು. ಪಂಚಾಯತ್ ರಾಜ್ ಸಚಿವ ರಾಜೀವ್ ರಂಜನ್ ಸಿಂಗ್ ಮಾತನಾಡಿ, "ಸಬ್ಕಾ ಸಾಥ್, ಸಬ್ಕಾ ವಿಕಾಸ್ " ಎಂಬ ದೃಷ್ಟಿಕೋನವನ್ನು ಉಲ್ಲೇಖಿಸಿ, ಈ ಮಸೂದೆಗಳು ಮಹಿಳೆಯರಿಗೆ ನ್ಯಾಯ ಒದಗಿಸುತ್ತವೆ ಎಂದು ಹೇಳಿದರು. ಟಿಎಂಸಿ ಸಂಸದ ಕಲ್ಯಾಣ್ ಬ್ಯಾನರ್ಜಿ ಮಾತನಾಡಿ, ವಿಶೇಷ ಅಧಿವೇಶನದ ಅಗತ್ಯತೆಯನ್ನು ಪ್ರಶ್ನಿಸಿದರಲ್ಲದೇ ಮಹಿಳಾ ಮೀಸಲು ಪ್ರಸ್ತುತ ಸಂಸತ್ತಿನ ಸಾಮರ್ಥ್ಯದ ಆಧಾರದ ಮೇಲೆ ಜಾರಿಗೆ ಬರಬೇಕು ಎಂದು ಹೇಳಿದರು. ಸಮಾಜವಾದಿ ಪಕ್ಷದ ದಿಂಪಲ್ ಯಾದವ್ ಮಾತನಾಡಿ, ಮಹಿಳೆಯರಿಗೆ ನ್ಯಾಯ ನೀಡಲು ಶಿಕ್ಷಣಕ್ಕೆ ಹೆಚ್ಚಿನ ಒತ್ತು ಕೊಡಬೇಕು ಎಂದು ಹೇಳಿದರು. ಎಸ್‌ಎಡಿ ಪಕ್ಷದ ಹರ್‌ಸಿಮ್ರತ್ ಕೌರ್ ಬಾದಲ್ ಕೂಡ ಕ್ಷೇತ್ರ ಮರು ವಿಂಗಡಣೆ ಇಲ್ಲದೇ ಮಹಿಳಾ ಮೀಸಲು ಜಾರಿಗೊಳಿಸಬೇಕು ಎಂದು ಆಗ್ರಹಿಸಿದರು. ಆರೋಗ್ಯ ಮತ್ತು ಕುಟುಂಬ ಕಲ್ಯಾಣ ರಾಜ್ಯ ಸಚಿವೆ ಅನುಪ್ರಿಯಾ ಪಟೇಲ್, ಇದು ಮಹಿಳೆಯರ ಪಾಲ್ಗೊಳ್ಳುವಿಕೆಯನ್ನು ಹೆಚ್ಚಿಸುವ ಐತಿಹಾಸಿಕ ಸಂದರ್ಭ ಎಂದು ವರ್ಣಿಸಿದರು.

*********

ಇರಾನ್ ತನ್ನ ಸಂವರ್ಧಿತ ಯುರೇನಿಯಂಅನ್ನು ಅಮೆರಿಕಕ್ಕೆ ವರ್ಗಾಯಿಸಲು ಒಪ್ಪಿಕೊಂಡಿದೆ ಎಂಬ ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರ ಹೇಳಿಕೆಯನ್ನು ಇರಾನ್ ತಿರಸ್ಕರಿಸಿದೆ. ಇರಾನ್ ವಿದೇಶಾಂಗ ಸಚಿವಾಲಯದ ವಕ್ತಾರ ಇಸ್ಮಾಯಿಲ್ ಬಘಾಯಿ ಅವರು ಹೇಳಿಕೆ ನೀಡಿ, ಯಾವುದೇ ಪರಿಸ್ಥಿತಿಯಲ್ಲಿಯೂ ತೆಹ್ರಾನ್ ಇಂತಹ ಕ್ರಮಕ್ಕೆ ಅವಕಾಶ ನೀಡುವುದಿಲ್ಲ ಎಂದು ಹೇಳಿದ್ದಾರೆ. ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರು, ಅಮೆರಿಕದೊಂದಿಗೆ ನಡೆಯುತ್ತಿರುವ ಮಾತುಕತೆಯಲ್ಲಿ ಇರಾನ್ ಎಲ್ಲ ವಿಷಯಗಳಿಗೂ ಒಪ್ಪಿಕೊಂಡಿದೆ. ಅದರಲ್ಲೂ ಸಂವರ್ಧಿತ ಯುರೇನಿಯಂ ಅನ್ನು ಇರಾನ್‌ನಿಂದ ಪಡೆದು ಅಮೆರಿಕಕ್ಕೆ ಸಾಗಿಸುವ ಜಂಟಿ ಯೋಜನೆಯೂ ಒಳಗೊಂಡಿದೆ ಎಂದು ಹೇಳಿದ ನಂತರ ಬಘಾಯಿ ಪ್ರತಿಕ್ರಿಯೆ ನೀಡಿದ್ದಾರೆ. ಹೋರ್ಮುಜ್

ಜಲಸಂಧಿಗೆ ಸಂಬಂಧಿಸಿದಂತೆ ಅಮೆರಿಕದ ಅಧಿಕಾರಿಗಳ ಹೇಳಿಕೆಗಳನ್ನು ಬಘಾಯಿ ಟೀಕಿಸಿದ್ದು, ಅವು ಪರಸ್ಪರ ವಿರೋಧಾಭಾಸಗಳಿಂದ ಕೂಡಿದೆ. ಇದು ನಿರಾಶೆ ಮತ್ತು ಅಸಹಾಯಕತೆಯ ಸಂಕೇತವಾಗಿದೆ ಎಂದು ತಿಳಿಸಿದ್ದಾರೆ.

*********

ಬ್ರಿಟನ್ ಮತ್ತು ಫ್ರಾನ್ಸ್ ನೇತೃತ್ವದಲ್ಲಿ ನಡೆಯುತ್ತಿರುವ ಸಮುದ್ರ ಭದ್ರತಾ ಉಪಕ್ರಮದಲ್ಲಿ ಭಾಗವಹಿಸಲು ಭಾರತಕ್ಕೆ ಅಧಿಕೃತ ಆಹ್ವಾನ ದೊರೆತಿದೆ. ಹೋರ್ಮುಜ್ ಜಲಸಂಧಿಯ ಮೂಲಕ ಸಾಗಾಟವನ್ನು ರಕ್ಷಿಸುವ ಉದ್ದೇಶದಿಂದ ಈ ಉಪಕ್ರಮವನ್ನು ಕೈಗೊಳ್ಳಲಾಗಿದೆ. ಇದು ಜಗತ್ತಿನ ಪ್ರಮುಖ ತಂತ್ರಜ್ಞಾನದ ಸಮುದ್ರ ಮಾರ್ಗಗಳಲ್ಲಿ ಒಂದು ಎಂದು ಪರಿಗಣಿಸಲಾಗಿದೆ. ವಿದೇಶಾಂಗ ವ್ಯವಹಾರಗಳ ಸಚಿವಾಲಯದ ವಕ್ತಾರ ರಣಧೀರ್ ಜೈಸ್ವಾಲ್ ಅವರು ಈ ಆಹ್ವಾನವನ್ನು ದೃಢಪಡಿಸಿದ್ದಾರೆ. ಜಾಗತಿಕ ತೈಲ ವಾಣಿಜ್ಯ ವಲಯದ ಸುಮಾರು ಶೇ ೨೦ರ ವರೆಗೆ ಸಾಗಾಟ ನಡೆಯುವ ಈ ಪ್ರಮುಖ ಮಾರ್ಗದ ಭದ್ರತೆಯನ್ನು ಖಚಿತಪಡಿಸಲು ಅಂತಾರಾಷ್ಟ್ರೀಯ ಸಮುದಾಯವು ಪ್ರಯತ್ನಗಳನ್ನು ತೀವ್ರಗೊಳಿಸುತ್ತಿರುವ ಸಂದರ್ಭದಲ್ಲಿ ಈ ಆಹ್ವಾನ ಬಂದಿದೆ. ಇದೇ ಸಂದರ್ಭದಲ್ಲಿ, ಬ್ರಿಟನ್ ಪ್ರಧಾನಮಂತ್ರಿ ಕೀರ್ ಸ್ಟಾರ್ಮರ್ ಮತ್ತು ಫ್ರಾನ್ಸ್ ಅಧ್ಯಕ್ಷ ಎಮ್ಮಾನುಯೆಲ್ ಮ್ಯಾಕ್ರೋನ್ ಅವರು ಪ್ಯಾರಿಸ್ ನ  ಎಲಿಸೇ ಅರಮನೆಯಲ್ಲಿ ಮಾತುಕತೆ ನಡೆಸಿದರು. ಹೋರ್ಮುಜ್ ಜಲಸಂಧಿಯ ಪರಿಸ್ಥಿತಿಯನ್ನು ಚರ್ಚಿಸಲು ಸುಮಾರು ೪೦ ದೇಶಗಳೊಂದಿಗೆ ವರ್ಚುವಲ್ ಶೃಂಗಸಭೆಯನ್ನು ಆಯೋಜಿಸಲು ಅವರು ಸಿದ್ಧತೆ ನಡೆಸುತ್ತಿದ್ದಾರೆ. ಜರ್ಮನಿ ಚಾನ್ಸಲರ್ ಫ್ರಿಡ್ರಿಕ್ ಮರ್ಝ್ ಕೂಡ ಈ ಸಭೆಯಲ್ಲಿ ಭಾಗವಹಿಸುವ ಸಾಧ್ಯತೆಯಿದ್ದು, ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರನ್ನು ಕೂಡ ಈ ಪ್ರಕ್ರಿಯೆಯಲ್ಲಿ ಸೇರಿಸಬೇಕೆಂದು ಕೋರಿದ್ದಾರೆ.

*********

ದಕ್ಷಿಣಾ ಆಫ್ರಿಕಾದ ಡರ್ಬನ್‌ನಲ್ಲಿ ನಿನ್ನೆ ನಡೆದ ಮೊದಲ ಮಹಿಳಾ ಟಿ೨೦ ಅಂತಾರಾಷ್ಟ್ರೀಯ ಕ್ರಿಕೆಟ್ ಪಂದ್ಯದಲ್ಲಿ ದಕ್ಷಿಣ ಆಫ್ರಿಕಾ ತಂಡ ಭಾರತವನ್ನು ೬ ವಿಕೆಟ್ ಗಳಿಂದ ಸೋಲಿಸಿದೆ. ೧೫೮ ರನ್‌ಗಳ ಗೆಲುವಿನ ಗುರಿ ಬೆನ್ನಟ್ಟಿದ ಆತಿಥೇಯ ದಕ್ಷಿಣ ಆಫ್ರಿಕಾ ತಂಡವು ೧೯.೧ ಓವರ್‌ಗಳಲ್ಲಿ ಗೆಲುವಿನ ಗುರಿ ಸಾಧಿಸಿತು.  ಲೋರಾ ವೋಲ್ವಾರ್ಟ್ ಅವರ ಆಕರ್ಷಕ ೫೧ ರನ್ ಗಳು ತಂಡದ ಗೆಲುವಿಗೆ ಬುನಾದಿಯಾದವು. ಅನ್ನೆರಿ ಡೆರ್ಕ್ಸೆನ್ ಅಜೇಯ ೪೪ ರನ್ ಗಳಿಸಿದರು.  ಈ ಮೂಲಕ ಐದು ಪಂದ್ಯಗಳ ಸರಣಿಯಲ್ಲಿ ದಕ್ಷಿಣ ಆಫ್ರಿಕಾ ೧-೦ ಮುನ್ನಡೆಯಲ್ಲಿದೆ. ಮೊದಲು ಬ್ಯಾಟಿಂಗ್ ಮಾಡಿದ ಭಾರತ ತಂಡ ೭ ವಿಕೆಟ್ ನಷ್ಟಕ್ಕೆ ೧೫೭ ರನ್ ಗಳಿಸಿತು. ಸರಣಿಯ ಮುಂದಿನ ಪಂದ್ಯ

ನಾಳೆ ಇದೇ ಮೈದಾನದಲ್ಲಿ ನಡೆಯಲಿದೆ. ಮೂರನೇ ಮತ್ತು ನಾಲ್ಕನೇ ಪಂದ್ಯಗಳು ಈ ತಿಂಗಳ ೧೧ ಮತ್ತು ೧೫ ರಂದು ಜೋಹಾನ್ಸ್ ಬರ್ಗ್ ನಲ್ಲಿ ನಡೆಯಲಿವೆ. ಏಪ್ರಿಲ್ ೧೭ರಂದು ಅಂತಿಮ ಪಂದ್ಯವು ಬೆನೋನಿಯ ವಿಲ್ಲೋಮೋರ್ ಪಾರ್ಕ್ ನಲ್ಲಿ ನಡೆಯಲಿದೆ. ಮಹಿಳಾ ಟಿ೨೦ ವಿಶ್ವಕಪ್ ಇನ್ನೂ ಎರಡು ತಿಂಗಳು ಮಾತ್ರ ಬಾಕಿ ಇರುವ ಈ ಸಂದರ್ಭದಲ್ಲಿ ಈ ಸರಣಿ ಮಹತ್ವ ಪಡೆದುಕೊಂಡಿದೆ.

****END****